# ಅವರ ಹಗೆ ಸಾಧನೆಗೆ ಸೇತುವೆ ಸುಶಾಂತ್



**ಅರ್ಜುನ್ ಯೋಗಿ**
ಉದಯದ
'ಶಾಂತಿನಿವಾಸ'
ಸುಶಾಂತ್

◆ **ಸಿನಿಮಾದಲ್ಲಿ ಬಿಜಿ ಇದ್ದವರು ಕಿರುತೆರೆಗೆ ಮರು ಪ್ರವೇಶದ ವಿಶೇಷ ಏನು?**

ಸಿನಿಮಾರಂಗ ಸಂಕೀರ್ಣ ಪರಿಸ್ಥಿತಿಯಲ್ಲಿ ಇದೆ. ಪ್ರಾಯೋಗಿಕವಾಗಿ ನೋಡಬೇಕು. ಸಿನಿಮಾ ಎಷ್ಟರಮಟ್ಟಿಗೆ ಟಾಕೀಸ್‌ನಲ್ಲಿ ಓಡುತ್ತಿದೆ, ಟೀವಿಯಿಂದ ಎಷ್ಟು ಹಣ ಬರುತ್ತದೆ, ಅದರ ನಿರ್ಮಾಣದ ವೆಚ್ಚ ಎಷ್ಟಾಗುತ್ತಿದೆ ಎನ್ನುವುದು ಗೊತ್ತಿರುವ ಸಂಗತಿ. ಆರು ವರ್ಷದಿಂದ ಸಿನಿಮಾ ಮಾಡಿರುವ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ, ನಿರ್ಮಾಪಕರು ಸಿನಿಮಾ ಪ್ರಚಾರಕ್ಕೂ ಕೂಡ ನಟರನ್ನೇ ಅವಲಂಬಿಸುವ ಪರಿಸ್ಥಿತಿ ಇದೆ. ಸಿನಿಮಾಕ್ಕೆ ವರ್ಷಗಟ್ಟಲೆ ನಾವು ಕೆಲಸ ಮಾಡುತ್ತೇವೆ. ಅದು ವ್ಯವಹಾರಿಕವಾಗಿ ಗೆದ್ದರೆ ಮಾತ್ರ ಮುಂದಿನ ಹಂತಕ್ಕೆ ಬೆಳವಣಿಗೆ ಹೊಂದಲು ಸಾಧ್ಯ. ಹಣಕಾಸಿನಿಂದ ಅನುಕೂಲ ಆಗದಿದ್ದರೆ ಕಷ್ಟ. ಈಗ ಪರಿಸ್ಥಿತಿ ಕೂಡ ಸರಿ ಇಲ್ಲದ ಕಾರಣ ಒಂದು. ಸಿನಿಮಾವನ್ನು ಜನರಿಗೆ ತಲುಪಿಸಲು ಬೇರೆಯ ಶಕ್ತಿ ಬೇಕಾಗುತ್ತದೆ. ಸಿನಿಮಾ ಮಾಡುವುದಕ್ಕಿಂತ ತಲುಪಿಸುವುದು ಸಾಹಸ. ಮಾಡಿದ ಖರ್ಚು ಮರಳಿ ಬರದಿದ್ದರೆ ಇನ್ನೂ ಕಷ್ಟ ಎದುರಿಸಬೇಕಾಗುತ್ತದೆ. ಸಿನಿಮಾ ನಂಬರ್ ಹೆಚ್ಚಿಸುವ ಕಾರಣಕ್ಕೆ ಮಾಡದೆ ಸ್ವಲ್ಪ ತಟಸ್ಥ ಆಗಿದ್ದೇನೆ. ತುಂಬ ದಿನಗಳಿಂದ ಕಿರುತೆರೆಗೆ ಕರೆಯುತ್ತಿದ್ದರು. ನಾನು ಮೊದಲು 'ಸರಸ್ವತಿ' ಸೀರಿಯಲ್ ಮಾಡಿದ್ದೆ. ಅದೇ ನಿರ್ದೇಶಕರಿಂದ ಆಹ್ವಾನ ಬಂದಿದ್ದರಿಂದ ಟೀವಿಯಲ್ಲೂ ಮಾಡಬೇಕು ಎಂದು ಅನಿಸಿತು. ಸಿನಿಮಾಕ್ಕೆ ಸ್ವಲ್ಪ ದಿನ ಬಿಡುವು ಕೊಟ್ಟು ಧಾರಾವಾಹಿಯಲ್ಲಿ ತೊಡಗಿದ್ದೇನೆ. ಸದಾ ಕೆಲಸದ ಒತ್ತಡದಲ್ಲಿ ಇರಬೇಕು ಎನ್ನುವ ಮನೋಭಾವ ನನ್ನದು. ಈಗ 'ಶಾಂತಿನಿವಾಸ'ದ ಕೆಲಸದಲ್ಲಿ ತೊಡಗಿದ್ದೇನೆ.

◆ **ಶಾಂತಿ–ಮಂತ್ರಾಳ ಸಂಘರ್ಷದಲ್ಲಿ ಸುಶಾಂತ್ ಪಾತ್ರಕ್ಕೆ ನ್ಯಾಯ ನಿರೀಕ್ಷೆ ಮಾಡಬಹುದಾ?**

ಇವರ ಇಬ್ಬರ ನಡುವೆ ಸೇತುವೆ ಆಗುವ ಪಾತ್ರವಿದು. ಹೆಸರಿಗೆ ಶಾಂತಿನಿವಾಸ ಆಗಿದ್ದರೂ ಕಥೆ ಸಂಪೂರ್ಣ ಸುಶಾಂತ್ ಸುತ್ತಲೇ ಸುತ್ತುತ್ತದೆ. ಶಾಂತಿಯ ವಿರುದ್ಧ ಸೇಡು ತೀರಿಸಿಕೊಳ್ಳುವ ಬಯಸುವ ಮಂತ್ರಾಳಿಗೆ ಸುಶಾಂತ್ ಬೇಕು. ಸುಶಾಂತ್ ಒಳ್ಳೆಯವನು, ತನ್ನ ತಂದೆಯ ಸೂಚನೆಯಂತೆ ಶಾಂತಿಯನ್ನು ಮದುವೆ ಆಗಿರುತ್ತಾನೆ. ತಾನು ನಿರೀಕ್ಷೆ ಮಾಡುವ ಮಟ್ಟಿಗೆ ಶಾಂತಿಯ ಸ್ಪಂದನೆ ಸಿಗುವುದಿಲ್ಲ. ಅದು ಮಂತ್ರಾಳಿಂದ ಸಿಗುತ್ತದೆ ಎನ್ನುವುದು ಗೊತ್ತಾದ ನಂತರ ಅವಳ ಕಡೆ ವಾಲುತ್ತಾನೆ. ಮಂತ್ರಾ ಕೂಡ ಸುಶಾಂತ್‌ನನ್ನು ದಾಳವಾಗಿ ಬಳಸಲು ಬಯಸುತ್ತಾಳೆ. ಇವನಿಗೆ ಶಾಂತಿ ಮೇಲೆ ಇರುವ ಅಸಮಾಧಾನ ಮಂತ್ರಾಳ ಕಡೆ ಒಲವು ಮೂಡಿಸುತ್ತದೆ. ಕಥೆ ಇದೇ ರೀತಿ ಸಾಗುತ್ತಿದೆ. ಮುಂದಿನ ಅವನ ನಿರ್ಧಾರ ಏನು ಅನ್ನುವುದು ಕಥೆ ಬೆಳವಣಿಗೆಯ ಕುತೂಹಲ ಘಟ್ಟ. ಅದನ್ನು ತೆರೆಯಲ್ಲೇ ಕಾಣಬೇಕು. ನಾನು ಈ ಮೊದಲು ಇಂತಹ ಪಾತ್ರವನ್ನು ಮಾಡಿರಲಿಲ್ಲ. ವಿಶಿಷ್ಟ ಪಾತ್ರ ಎನ್ನಬಹುದು. ಎಲ್ಲರ ಮನೆಯಲ್ಲೂ ಇಂತಹ ಒಂದು ಪಾತ್ರ ಇದ್ದೇ ಇರುತ್ತೆ ಎಂದು ನಾನಂತೂ ಅಂದುಕೊಂಡಿದ್ದೇನೆ. ವೈಯಕ್ತಿಕವಾಗಿ ಆತ ಒಳ್ಳೆಯವ. ಅಣ್ಣ–ತಮ್ಮ ಜೊತೆಗೆ ಬೆಳೆದಿದ್ದರೂ ಅಣ್ಣನಿಗಿಂತ ತಾನು ಏನೋ ಹೆಚ್ಚಿನದ್ದು ಮಾಡಬೇಕು ಎನ್ನುವ ಹಪಾಹಪಿ ತಮ್ಮನಾದವನಿಗೆ ಇರುವ ಸಾಧ್ಯತೆ ಹೆಚ್ಚು. ಅಣ್ಣನ ಮೀರಿಸುವ ಸಣ್ಣ ಸ್ವಾರ್ಥ ಇರುವ ಹುಡುಗ. ಅವನ ಬಾಳಿನಲ್ಲಿ ಬೇರೆಯವರು ಹೇಗೆ ಭಾಗಿಯಾಗುತ್ತಾರೆ. ಆ ಪಾತ್ರಕ್ಕೆ ನೆಗೆಟಿವ್ ಮತ್ತು ಪಾಸಿಟಿವ್ ವರ್ತನೆ ಇದೆ.

◆ **ಕಥೆಯ ಕವಲು ವೀಕ್ಷಕನಿಗೆ ಕಿರಿಕಿರಿ ಅನ್ನಿಸುತ್ತದೆ. ಕಥೆಯ ಮೂಲ ಧಾರೆಯಲ್ಲೆ ಏಕೆ ಸಾಗಲು ಆಗುವುದಿಲ್ಲ?**

ಒಂದೇ ರೀತಿ ಇದ್ದರೆ ಜನರಲ್ಲಿ ಕುತೂಹಲ ಹುಟ್ಟುವುದಿಲ್ಲ. ಪಾತ್ರಕ್ಕೂ ಏರಿಳಿತ ಅನ್ನುವುದು ಇರಬೇಕು ಎಂದೇ ವೀಕ್ಷಕರು ಬಯಸುತ್ತಾರೆ. ಒಳ್ಳೆಯ ಪಾತ್ರ ಒಂದನ್ನು ಹಾಗೆಯೇ ಎಷ್ಟು ದಿನ ನೋಡಲು ಸಾಧ್ಯ. ಅದಕ್ಕೆ ಅಡ್ಡಿ, ಆತಂಕಗಳೂ ಎದುರಾಗಬೇಕು. ಸಾಮಾನ್ಯವಾಗಿ ನೆಗೆಟಿವ್ ನಡವಳಿಕೆಯನ್ನೇ ಜನ ಹೆಚ್ಚು ಇಷ್ಟಪಡುತ್ತಿದ್ದಾರೆ. ಆಕರ್ಷಣೆಯನ್ನು ರೂಪಿಸಲು ಏರಿಳಿತ ಬೇಕೇ ಬೇಕು. ಒಂದು ಮೆಗಾ ಧಾರಾವಾಹಿಯಲ್ಲಿ ಹಲವರು ಕೆಲಸ ಮಾಡುತ್ತಿರುತ್ತಾರೆ. ಕೆಲವೊಮ್ಮೆ ಅನಿರೀಕ್ಷಿತ ಸಮಸ್ಯೆಗಳು ಎದುರಾಗಬಹುದು. ಕೆಲವರಿಗೆ ದಿನಗಳ ತೊಂದರೆ ಎದುರಾಗಬಹುದು. ಆರೋಗ್ಯ ಸಮಸ್ಯೆ ಉಂಟಾಗಬಹುದು. ಆಗ ಲಭ್ಯ ಇರುವ ಪಾತ್ರಗಳ ಮೂಲಕವೇ ಕಥೆಯನ್ನು ನಿರೂಪಿಸಬೇಕಾಗುತ್ತದೆ. ಈಗ ಪರಿಸ್ಥಿತಿ ಹೇಗಿದೆ ಅಂದರೆ, ಹಿಂದೆ ಪ್ರಸಾರವಾದ ಕಥೆಯಲ್ಲಿ ವೀಕ್ಷಕರ ಆಕರ್ಷಣೆಯ ಕೇಂದ್ರವನ್ನು ಟಿಆರ್‌ಪಿ ಮಾನದಂಡದ ಮೂಲಕ ಅಳೆಯುತ್ತಾರೆ. ಅದುವೇ ಕಥೆಯ ಮುಂದಿನ ಬೆಳವಣಿಗೆಗೆ ಕೈದೀವಿಗೆ ಆಗುತ್ತದೆ. ಹೀಗೆ ಬೇರೆ ಬೇರೆ ಸವಾಲುಗಳ ನಡುವೆ ಒಂದು ಕಥೆಯನ್ನು ಕಟ್ಟಬೇಕಾಗುತ್ತದೆ. ವೀಕ್ಷಕರಿಗೆ ನ್ಯಾಯವನ್ನು ನಿರ್ಮಾಣ ತಂಡ ಮಾಡುತ್ತದೆ. ನಟನಾಗಿ ನನ್ನ ಸ್ಕ್ರಿಪ್ಟ್‌ಗೆ ಬದ್ಧನಾಗಿ ನನ್ನ ಕೆಲಸ ಮಾಡಬೇಕಾಗುತ್ತದೆ.

■ **ರಾಘವೇಂದ್ರ ಕೆ.**